CABINET SUB-COMMITTEE TO CONSIDER RESERVATION OF POSTS TO BACKWARD CLASS, SCHEDULED CASTES/ SCHEDULED TRIBES

87. SRI K. SIDDAIAH. (Santhemaranahally).—

Will the Chief Minister be pleased to state —

(*a*) when the cabinet Sub-Committee was constituted to consider the question of classification, reservation of posts etc., to the Backward Class, Scheduled Castes and Scheduled Tribes in the State Civil Service .

(*b*) the number of times the Sub-Comittee met to consider that question.

(*c*) whether final decision has been taken by the Committee so far.

(*d*) whether the Government is also considering to constitute a Recruting Committee or body for all Public Undertaking (Corporation or autonomus) and other local bodies ?

SRI N. HUTCHMASTI GOWDA. (Minister for Revenue) [On Behalf of SRI D. DEVARAJ URS, (Chief Minister)].—

(*a*) A Cabenet Sub-Committee for scrutinising certain Cardre and Recruitment Rules was constituted on 16th November 1972 Thereafter, a separate cabinete Sub-Committee was constituted on 19th March 1973 for reviewing employment position in Government departments and Government and Quasi-Government institutions and take necessary steps to secure adequate representation to Schedule Tribes Scheduled Castes, other Backward Classes and linguistic and other minorities.

(*b*) The cabinet Sub-Committee constituted earlier has met five times and the cabinet Sub-Committee constituted later has met twice.

(*c*) The question of taking any final decision does not arise since the Sub-Committee has to consider all problems relating to the matter as and when they arise.

(*d*) There is no such proposal under consideration.

† ಶ್ರೀ ಕೆ. ಸಿದ್ದಯ್ಯ.—(ಸಿ) ಪ್ರಶ್ನೆಗೆ ಉತ್ತರವಾಗಿ ಅಂತಿಮ ನಿರ್ಣಯ ತೆಗೆದುಕೊಂಡಿಲ್ಲ. ವಿಚಾರ ಮಾಡ.ತ್ತೇವೆಂದು ತಿಳಿಸಿದ್ದೀರಿ. ಆದ್ದರಿಂದ ಇದನ್ನು ಯಾವಾಗ ಪರ್ಯಾಲೋಚಿಸಿ ಮಾಡಿ ಅಂತಿಮ ನಿರ್ಣಯ ತೆಗೆದುಕೊಳ್ಳುತ್ತೀರಿ,

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಸಮಿತಿಗೆ ಏನಾದರೂ ಕೆಲಸ ಬಂದಾಗ ಪರ್ಯಾಲೋಚನೆಗೆ ತೆಗೆದುಕೊಳ್ಳುತ್ತದೆ. ಮತ್ತು ಆ ವಿಷಯದ ಮೇಲೆ ತೀರ್ಮಾನ ಮಾಡುತ್ತಾರೆ.

ಶ್ರೀ ಕೆ ಸಿದ್ದಯ್ಯ.—ಇದರಲ್ಲಿ ಕೆಲವು ಮುಖ್ಯವಾದ ಸಮಸ್ಯೆಗಳಿವೆ. ಅವುಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳದಿದ್ದರೆ ಅನೇಕ ಹಿಂದುಳಿದ ವರ್ಗದ ಜನರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಅಂಥ ಮುಖ್ಯ ಸಮಸ್ಯೆಗಳ ಬಗ್ಗೆ ಒಂದು ಅಂತಿಮ ನಿರ್ಣಯ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದರ ಬಗ್ಗೆ ಬೇಗನೇ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.— ಈ ಮಂತ್ರಿಮಂಡಲದ ಉಪಸಮಿತಿ ಮಾಡಿರತಕ್ಕಂಥ ಕೆಲಸಗಳು ಯಾವುವು ಮತ್ತು ಅವರು ತಮ್ಮ ವರದಿಯನ್ನು ಪೂರ್ತಿಯಾಗಿ ಯಾವಾಗ ಕೊಡುತ್ತಾರೆ. ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಉಪಸಮಿತಿಯನ್ನು ಮಾಡಿರತಕ್ಕಂತಹ ಉದ್ದೇಶ—ಅದಕ್ಕೆ ವಿಷಯ ಬಂದಾಗಲೆಲ್ಲಾ ತೀರ್ಮಾನ ಮಾಡತಕ್ಕದ್ದು. ಆದ್ದರಿಂದ ಅದು ಯಾವ್ಯಾವ ಕೆಲಸ ಸಾಧಿಸಿದೆ ಎಂದು ಹೇಳಲಿಕ್ಕಾಗುವುದಿಲ್ಲ. ಅದು ಕೇಡರ್ ಅಂಡ್ ರಿಕ್ರ್ಯೂಟ್‌ಮೆಂಟ್ ರೂಲ್ಸ್ ಬಗ್ಗೆ ಕನ್ಸಿಡರ್ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—(೫)ಗೆ ಉತ್ತರವಾಗಿ ಅಂಥ ಸಲಹೆಗಳು ಇಲ್ಲವೆಂದು ಹೇಳಿದ್ದೀರಿ. ಇವತ್ತು ಮೈಸೂರು ಬ್ಯಾಂಕ್ ಎಂ. ಎಸ್. ಇ. ಬಿ. ಮಂತ್ರಿತರ ಸ್ವಯಂ ಆಡಳಿತ ಸಂಸ್ಥೆಗಳಲ್ಲಿ ಒಂದೇ ಪಂಗಡದ ಜನರಿಗೆ ನೌಕರಿ ಸಿಗುತ್ತದೆ. ಆದ್ದರಿಂದ ಅಲ್ಲಿ ಎಲ್ಲಾ ಜನರಿಗೂ ನೌಕರಿ ಸಿಗುವ ಉದ್ದೇಶದಿಂದ ಇದರ ಬಗ್ಗೆ ಸಲಹೆ ಕೊಡುವುದಕ್ಕೆ ಒಂದು ಸಲಹಾ ಮಂಡಲಿಯನ್ನು ನೇಮಕ ಮಾಡುತ್ತೀರಾ. ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಲ್ಲಿ ಪ್ರತ್ಯೇಕವಾದ ರಿಕ್ರ್ಯೂಟ್‌ಮೆಂಟ್ ಮಾಡುತ್ತೀರಾ ಎಂದು ಕೇಳಿದ್ದಕ್ಕೆ ಇಲ್ಲವೆಂದು ಹೇಳಿದ್ದೇವೆ ಕ್ಯಾಬಿನೆಟ್ ಸಬ್ ಕಮಿಟಿ ವಿಷಯ ಬಂದಾಗ ಪರ್ಯಾಲೋಚನೆ ಮಾಡಿ ಪಿಎಸ್‌ಸಿ ಯಲ್ಲಿ ಜನರಲ್ ಪಾಲಿಸಿ ಏನಿದೆ. ಆದೇ ಪಾಲಿಸಿಯನ್ನು ಸರ್ಕಾರ ಮಾಡಿರತಕ್ಕಂಥ ಕಾರ್ಪೊರೇಷನ್‌ಗಳಲ್ಲಿ ಅನುಸರಿಸಬೇಕೆಂದು ತಿಳಿಸಿದ್ದೇವೆ. ಉಳಿದ ಸಂಸ್ಥೆಗಳಲ್ಲಿ ಎಷ್ಟುಮಟ್ಟಿಗೆ ಕಾರ್ಯಗತ ಮಾಡಬಹುದು ಎಂಬುದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಬಿ. ರಾವೂರಸ್ವಾಮಿ.— ಸ್ವಾಮಿ (ಅ) ಪ್ರಶ್ನೆಗೆ ಉತ್ತರವಾಗಿ ಈ ಮೊದಲೇ ರಚಿಸಲಾದ ಮಂತ್ರಿಮಂಡಲ ಉಪಸಮಿತಿಯು ಐದುಬಾರಿ ಸಭೆ ಸೇರಿದ್ದು ತದನಂತರ ರಚಿಸಿದ ಮಂತ್ರಿಮಂಡಲ ಉಪ ಸಮಿತಿಯು ಎರಡುಬಾರಿ ಸಭೆ ಸೇರಿದ್ದಿತು ಎಂದು ಹೇಳಿದ್ದೀರಿ, ಅವರು ಯಾವ ಯಾವ ವಿಚಾರಗಳನ್ನು ಪರ್ಯಾಲೋಚನೆ ಮಾಡಿ ತೀರ್ಮಾನ ತೆಗೆದುಕೊಂಡಿದ್ದಾರೆ, ಯಾವ ಯಾವ ಡಿಪಾರ್ಟ್‌ಮೆಂಟ್ ಬಗ್ಗೆ ಏನುಕ್ರಮ ಯಾವ ಯಾವ ತೀರ್ಮಾನ ತೆಗೆದುಕೊಂಡಿದ್ದಾರೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಇಲ್ಲಿ ಪ್ರಶ್ನೆ ಇರುವುದು ರಾಜ್ಯದ ಸಿವಿಲ್ ಸೇವೆಗಳಲ್ಲಿ ಹಿಂದುಳಿದ ವರ್ಗ, ಅನುಸೂಚಿತಜಾತಿ ಹಾಗೂ ಅನುಸೂಚಿತ ಆದಿವಾಜಾತಿಗಳವರಿಗೆ ಹುದ್ದೆಗಳ ವರ್ಗೀಕರಣ, ವಿೂಸಲಾತಿ ಇತ್ಯಾದಿಗಳ ಪ್ರಶ್ನೆಯನ್ನು ಪರಿಶೀಲಿಸುವುದಕ್ಕೆ ಮಂತ್ರಿಮಂಡಲ ಉಪ ಸಮಿತಿ ಎಷ್ಟು ಬಾರಿ ಸಭೆ ಸೇರಿದ್ದಿತು ಎಂದು. ಅದಕ್ಕೆ ಉತ್ತರ ಮೊದಲೇ ರಚಿಸಲಾದ ಮಂತ್ರಿಮಂಡಲ ಉಪಸಮಿತಿಯು ಐದು ಬಾರಿ ಸಭೆ ಸೇರಿದ್ದು, ತದನಂತರ ರಚಿಸಿದ ಮಂತ್ರಿಮಂಡಲ ಉಪ ಸಮಿತಿಯು ಎರಡುಬಾರಿ ಸಭೆ ಸೇರಿದ್ದಿತು ಎಂದು ಹೇಳಿದೆ ಯಾವ ಯಾವ ಡಿಪಾರ್ಟ್‌ಮೆಂಟ್ ಬಗ್ಗೆ ಕೇಡರ್ ಅಂಡ್ ರಿಕ್ರ್ಯೂಟ್‌ಮೆಂಟ್ ವಿಷಯದಲ್ಲಿ ಯಾವ ಯಾವ ತೀರ್ಮಾನ ತೆಗೆದುಕೊಂಡಿದ್ದಾರೆ ಎನ್ನುವ ಬಗ್ಗೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರವನ್ನು ಹೇಳುತ್ತೇವೆ.

ಶ್ರೀ ಕೆ. ಸಿದ್ದಯ್ಯ — ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಎರಡು ಕ್ಯಾಬಿನೆಟ್ ಸಬ್ ಕಮಿಟಿಗಳನ್ನು ಮಾಡಿದ್ದೇವೆ. ಎಂದು ಹೇಳಿದ್ದೀರಿ, ಆ ಸಮಿತಿಯವರು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ವಿಷಯವನ್ನು ಪರ್ಯಾಲೋಚನೆ ಮಾಡುವ ಜೊತೆಗೆ ಪ್ರಮೋಷನಲ್ ಪೋಸ್ಟ್‌ಗಳನ್ನು ರಿಜರ್ವೇಷನ್ ಮಾಡುವುದನ್ನು ಪರ್ಯಾಲೋಚನೆ ಮಾಡಿದ್ದಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಪ್ರಶ್ನೆ ನೇರವಾಗಿ ಕ್ಯಾಬಿನೆಟ್ ವಲಯದಲ್ಲಿ ಇದೆ.

TOUR BY MINISTERS IN RAICHUR DISTRICT

103. SRI PRABURAJ PATIL (Yelburga).—

Will the Chief Minister be pleased to state.—

(*a*) the number of visits paid by each of the Ministers (including the Ministers of State) to Raichur District from April 1972 to end of July, 1973 and the taluks to which they paid the visit;